<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 640/2015 ಸಿಡಬ್ಲೂ: 6 ಪಿಡಬ್ಲೂ: 6

ಪ್ರಮಾಣವಚನ ಬೋಧಿಸಲಾಯಿತು ದಿಃ 22-04-2026

ಹೆಸರು : ಮಲ್ಲಪ್ಪ

ತಂದೆ ಹೆಸರು : ಬಸಪ್ಪ

ವಯಸ್ಸು : 60 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ತೇಲಕೂರ್

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ-1 ಮತ್ತು 7 ನನ್ನ ಮಗ. ಚಾಸಾ-4 ನನ್ನ ಹೆಂಡತಿ. ಚಾಸಾ-5 ಗೊತ್ತು. ಆರೋಪಿತರು ಗೊತ್ತು. ಸುಮಾರು 15 ವರ್ಷಗಳ ಹಿಂದೆ ಬೆಳಗ್ಗೆ 6 ಗಂಟೆ ಸುಮಾರಿಗೆ ಚಾಸಾ-1, 4, 7 ಮತ್ತು ನಾನು ಮನೆಯಲ್ಲಿದ್ದಾಗ 3ನೇ ಆರೋಪಿತನು ಬಂದು ಕಟ್ಟೆಯ ಮೇಲೆ ಇಟ್ಟಿದ ಕಟ್ಟಿಗೆ ಒದ್ದು ನಮ್ಮ ಜೊತೆಗೆ ಜಗಳ ತೆಗೆದರು. 1 ರಿಂದ 3ನೇ ಆರೋಪಿತರು ನಮ್ಮೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುವಾಗ ಚಾಸಾ-1ರವರು ಯಾಕೆ ಬೈಯುತ್ತಿದ್ದಿರಾ ಎಂದು ಕೇಳಿದಕ್ಕೆ ಆರೋಪಿತರು ಬಂದು ಬಡಿಗೆಯನ್ನು ತೆಗೆದುಕೊಂಡು ತಲೆಗೆ, ಬೆನ್ನಿಗೆ ಮತ್ತು ಕೈಗಳಿಗೆ ಹೊಡೆದಿರುತ್ತಾರೆ. ಅದೇ ರೀತಿ ಚಾಸಾ-7ರವರಿಗೆ 1 ರಿಂದ 3ನೇ ಆರೋಪಿತರು ಹೊಡೆದಿರುತ್ತಾರೆ. ಆಗ ನನಗೂ ಸಹ 3ನೇ ಆರೋಪಿತನು ಕಲ್ಲು ತೆಗೆದುಕೊಂಡು ನನ್ನ ಬೆನ್ನು ಹತ್ತಿ ನನಗೆ ಹೊಡೆದಿರುತ್ತಾರೆ.

ಅದೇ ರೀತಿ ಚಾಸಾ-4ರವರಿಗೆ 4 ಮತ್ತು 5ನೇ ಆರೋಪಿತರು ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ. ಆಗ ಚಾಸಾ-5ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಬಂದು ಆರೋಪಿತರ ವಿರುದ್ದ ದೂರನ್ನು ಸಲ್ಲಿಸಿರುತ್ತೇವೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಒಂದು ಕಲ್ಲು ಮತ್ತು ಒಂದು ಬಡಿಗೆ ತೋರಿಸಲಾಗಿ ಸಾಕ್ಷಿಯೂ ಇದೆ ಬಡಿಗೆ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ಪಾಟೀಸವಾಲುಃ ಮಾನ್ಯ ಸ.ಸ.ಅ ರವರಿಂದ:**</u>

ದಿನಾಂಕ 09-03-2016ರಂದು ಬೆಳಗ್ಗೆ 6 ಗಂಟೆ ಸುಮಾರಿಗೆ ನಮ್ಮ ಮತ್ತು ಆರೋಪಿತರ ಮಧ್ಯ ಜಗಳವಾಗಿತ್ತು ಎಂದರೆ ಸರಿ. ಜಗಳ ಬಿಟ್ಟು ಹೋಗುವಾಗ ಆರೋಪಿತರು ಬೋಸಡಿ ಮಕ್ಕಳೇ ಇವತ್ತು ಉಳಿದು

ಕೊಂಡಿದ್ದಿರಾ ಒಂದಲ್ಲಾ ಒಂದು ದಿವಸ ನಿಮ್ಮೆಲ್ಲರಿಗೆ ಹೊಡೆದು ಖಲಾಸ್ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ NM ವಕೀಲರಿಂದ:**

ಸ.ನಂ. 31/1/ಬಿ ವಿಸ್ತೀರ್ಣ 4 ಎಕರೆ ಹೊಲದ ಸಂಬಂಧ ನಮ್ಮ ಮತ್ತು ಆರೋಪಿತರ ನಡುವೆ ತಕರಾರು ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಗಳ ಕಟ್ಟಿಗೆ ಸಂಬಂಧವಾಗಿದೆ ಎಂದು ನುಡಿಯುತ್ತಾರೆ. ಸದರಿ ಸರ್ವೇ ನಂಬರನಲ್ಲಿ 5ನೇ ಆರೋಪಿಗೂ ಸಹ ಪಾಲು ಇತ್ತು ಎಂದರೆ ಸರಿ. 5ನೇ ಆರೋಪಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಆದ್ದರಿಂದ 5ನೇ ಆರೋಪಿತಳು 2ನೇ ಆರೋಪಿಗೆ ಬಿಡುಗಡೆ ಪತ್ರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಾವು ಸುಳ್ಳು ಕೇಸ್ ದಾಖಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸುಮಾರು 15 ವರ್ಷಗಳ ಹಿಂದೆ ಬೆಳಗ್ಗೆ 6 ಗಂಟೆ ಸುಮಾರಿಗೆ ಚಾಸಾ-1, 4, 7 ಮತ್ತು ನಾನು ಮನೆಯಲ್ಲಿದ್ದಾಗ 3ನೇ ಆರೋಪಿತನು ಬಂದು ಕಟ್ಟೆಯ ಮೇಲೆ ಇಟ್ಟಿದ ಕಟ್ಟಿಗೆ ಒದ್ದು ನಮ್ಮ ಜೊತೆಗೆ ಜಗಳ ತೆಗೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. 1 ರಿಂದ 3ನೇ ಆರೋಪಿತರು ನಮ್ಮೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುವಾಗ ಚಾಸಾ-1ರವರು ಯಾಕೆ ಬೈಯುತ್ತಿದ್ದಿರಾ ಎಂದು ಕೇಳಿದಕ್ಕೆ ಆರೋಪಿತರು ಬಂದು ಬಡಿಗೆಯನ್ನು ತೆಗೆದುಕೊಂಡು ತಲೆಗೆ, ಬೆನ್ನಿಗೆ ಮತ್ತು ಕೈಗಳಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಚಾಸಾ-7ರವರಿಗೆ 1 ರಿಂದ 3ನೇ ಆರೋಪಿತರು ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನನಗೂ ಸಹ 3ನೇ ಆರೋಪಿತನು ಕಲ್ಲು ತೆಗೆದುಕೊಂಡು ನನ್ನ ಬೆನ್ನು ಹತ್ತಿ ನನಗೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಅದೇ ರೀತಿ ಚಾಸಾ-4ರವರಿಗೆ 4 ಮತ್ತು 5ನೇ ಆರೋಪಿತರು ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಚಾಸಾ-5ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾನು ಆಸ್ಪತ್ರೆಗೆ ಬಂದು ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತೇವೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು.ಮಾ-1 ಮತ್ತು 2 ಸಾಮಾನ್ಯವಾಗಿ ಎಲ್ಲಾ ಕಡೆ ಲಭ್ಯ ವಿರುತ್ತವೆ ಎಂದರೆ ಸರಿಯಲ್ಲ. ಮು.ಮಾ-1 ಮತ್ತು 2ಕ್ಕೆ ಮತ್ತು ಘಟನೆಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮ್ಮ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಮು.ಮಾ-1 ಮತ್ತು 2 ಜಪ್ತಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**